## ಕವಿತೆ



**ಕರಿಸ್ವಾಮಿ ಕೆ.**

ಕಲೆ: ಸಂತೋಷ್ ಸಸಿಹಿತ್ಲು

# ಮಸಣದವ್ವನ ಸ್ವಗತ




ಸಾವುಗಳ ಸಂತೆಯಲ್ಲಿ
ಹಿಂದುಮುಂದಿನದ ಧೇನಿಸುವ
ಘಳಿಗೆಯೇ ಬರಲೊಲ್ಲದು!

ತೀರದ ಬಂಡೆಯಂತೆ ಮೈಯೊಡ್ಡಿ
ಎದುರುಗೊಳ್ಳಲೇಬೇಕು ಎಲ್ಲ ಅಲೆಗಳ
ಎಷ್ಟು ಸಾವುಗಳು, ಎಷ್ಟು ಭಾವಗಳು!

ಬಾಳಿ, ಬದುಕಿದ ಮುಖಗಳು ನೆನಪಿರುವುದಿಲ್ಲ
ಕಣ್ಣುಗಳಲ್ಲಿ, ಮುದ್ರೆಯಾಗದೆ ಇರುವುದಿಲ್ಲ
ಮುಚ್ಚಿದ ಕಣ್ಣುಗಳ ಕಂದಗಳ ಸ್ನಿಗ್ಧ ಲೋಕ!

ಕಣ್ಣ ಕಾಡೊಳಗೆ ಇದೊಂದೇ ಚಿತ್ರವಾಗಿರಲಿ ಬಹುಕಾಲ
ಇನ್ನೊಂದು ಮಗು ಹೆಣವಾಗಿ ಕಣ್ಮುಂದೆ ಬಾರದಿರಲಿ
ಸಂಕಟದ ಸುನಾಮಿಯ ಎದುರಿಸಲಾರೆ ಕಳೆದುಕೊಳ್ಳುವುದ ಭರಿಸಲಾರೆ!



ನೆಲವೇ ಚುಚ್ಚುವುದು, ಗಾಳಿಯೇ ಇರಿಯುವುದು, ನೆರಳೇ ರಕ್ತ ಹೀರುವುದು
ಕಣ್ಣ ರೆಪ್ಪೆಗಳು ಸೋತು ಎದೆಬಡಿತ ಚಟುಗುಮುಳ್ಳಾಗಿ
ದುಃಖದ ನೀರೆಲ್ಲವೂ ಕುಗ್ಗಿದೆದೆಯೆಡೆಗೇ ಹರಿಯುವುದು!

ಎಷ್ಟು ಮುಖಗಳು, ಎಷ್ಟೊಂದು ಮುಖವಾಡಗಳು
ಎಷ್ಟು ಸಂಬಂಧಗಳು, ಎಷ್ಟೊಂದು ನಾಟಕಗಳು
ಕಳಚಿಕೊಳ್ಳುವವು, ಕೂಡಿಕೊಳ್ಳುವವು ಹೆಣದ ಮೇಲಿನ ಬಟ್ಟೆಯಂತೆ!

ದುಃಖವೆಂಬ ಕಡಲಲ್ಲಿ ಹನಿ ಹನಿಯನ್ನೂ ಜೋಡಿಸಿದ ಉಪ್ಪುಂಟು
ಅಲ್ಲಿ ಕಣ್ಣೀರಿಡದ ಮೀನು, ಅಳುವ ಮೊಸಳೆಯೂ ಉಂಟು
ದುಃಖದ ಸಂತೆಯಲಿ ಸದಾ ತೇಲಿ ಬರುವ ಆಸೆಯ ಅಲೆಗಳುಂಟು!

ಹೆಣದ ಜೊತೆಗಿನ ಬಾಳನ್ನು ಹಂಗಿಸದಿರಿ, ಅನುಕಂಪ ತೋರದಿರಿ
ಹೀಗೇಕೆ ಮಸಣದಲ್ಲಿ ಎಂದು ಪ್ರಶ್ನಿಸದಿರಿ
ನಾನು ಎಲ್ಲ ಹೆಣಗಳ ಬೂದಿಯನೆ ಉಸಿರಾಡಿ ಬೆಳೆದಿರುವ ಸರ್ವಶಕ್ತೆ!

ನಾನು ಸುಖಿಯೂ ಅಲ್ಲ, ದುಃಖಿಯೂ ಅಲ್ಲ ಕಲಸುಮೇಲೋಗರದ
ಮೆರವಣಿಗೆಯಲ್ಲಿ, ಅವೆರಡನ್ನೂ ಲೆಕ್ಕಿಸಲು ಬರುವುದಿಲ್ಲ
ನಾನು ಭೂತಭವಿಷ್ಯಗಳಿಲ್ಲದ ವರ್ತಮಾನ...